MARCH 23, 2026

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು:

<><><>

- ‘ಇಂದಿನ ಆಚರಣೆ, ನಾಳೆಗಳ ರಕ್ಷಣೆ’; ಧ್ಯೇಯದೊಂದಿಗೆ, ಇಂದು, ವಿಶ್ವಹವಾಮಾನ ದಿನಾಚರಣೆ.
- ‘ಕಣ್ಣಿನ ಆರೈಕೆಯಲ್ಲಿ, ಜಾಗತಿಕ ಸಹಯೋಗ’, ಘೋಷವಾಕ್ಯದೊಂದಿಗೆ, ಸಮೀಪ ದೃಷ್ಟಿದೋಷ ನಿರ್ವಹಣೆ, ಸಪ್ತಾಹ.
- ಇಂದು ಹುತಾತ್ಮರ ದಿನ; ದೇಶಾದ್ಯಂತ, 763 ಜಿಲ್ಲೆಗಳಲ್ಲಿ, *‘ಶಹೀದ್ ದಿವಸ್ ಪದಯಾತ್ರಾ.’*
- *ಪಿ.ಎಂ. ಉಷಾ;* ಧಾರವಾಡ, ಕರ್ನಾಟಕ ವಿಶ್ವವಿದ್ಯಾಲಯದಲ್ಲಿ, ‘ಭಾರತೀಯ ಜ್ಞಾನ ಪದ್ಧತಿ’ ವಿಷಯದ, ರಾಷ್ಟ್ರೀಯ ವಿಚಾರ ಸಂಕಿರಣಕ್ಕೆ, ಇಂದು ಚಾಲನೆ.

<><><>

ಈಗ ವಾರ್ತೆಗಳ ವಿವರ

<><><>

ವಿಶ್ವ ಹವಾಮಾನ ದಿನವನ್ನು, ಪ್ರತಿ ವ ರ್ಷ ಮಾರ್ಚ್ 23 ರಂದು, ಜಾಗತಿಕವಾಗಿ ಆಚರಿಸಲಾಗುತ್ತದೆ. 1950ರ ಮಾರ್ಚ್ 23 ರಂದು, ವಿಶ್ವ ಹವಾಮಾನ ಸಂಸ್ಥೆ, ಸ್ಥಾಪನೆಗೊಂಡಿತು. ಹವಾಮಾನ ಬದಲಾವಣೆ, ವಾತಾವರಣ ವೈಪರೀತ್ಯ, ಅತಿವೃಷ್ಟಿ, ಅನಾವೃಷ್ಟಿ, ಬರಗಾಲ, ಜಲ ಸಂರಕ್ಷಣೆ ಮತ್ತು ಚಂಡಮಾರುತಗಳ ಬಗ್ಗೆ, ಜನರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ, ವಿಶ್ವ ಹವಾಮಾನ ದಿನವನ್ನು ಆಯೋಜಿಸಲಾಗಿದೆ.

<><><>

ಈ ಕುರಿತು ಒಂದು ವರದಿ..

<><><>

*“ಇಂದಿನ ಆಚರಣೆ, ನಾಳೆಗಳ ರಕ್ಷಣೆ” ಎಂಬ, ಧ್ಯೇಯದೊಂದಿಗೆ ಇಂದು, ವಿಶ್ವ ಹವಾಮಾನ ಅಥವಾ ವಾತಾವರಣ ದಿನವನ್ನು ಆಚರಿಸಲಾಗುತ್ತಿದೆ. ಜೀವ ವೈವಿಧ್ಯ ಮತ್ತು ಮಾನವ ಸಮಾಜದ ಸುರಕ್ಷತೆ ಹಾಗೂ ಯೋಗಕ್ಷೇಮಕ್ಕೆ, ರಾಷ್ಟ್ರೀಯ ಹವಾಮಾನ ಮತ್ತು ಜಲ ವಿಜ್ಞಾನ ಸೇವೆಗಳ, ಅಗತ್ಯ ಕೊಡುಗೆಯನ್ನು ಇಂದು ಸ್ಮರಿಸಿ, ಪ್ರದರ್ಶಿಸಲಾಗುತ್ತದೆ. ವಿಶ್ವ ಹವಾಮಾನ ದಿನಕ್ಕಾಗಿ, ಈ ಬಾರಿ,*

*ಸಾಮಯಿಕ ಹವಾಮಾನ, ಹವಾಮಾನ ಅಥವಾ ನೀರು ಸಂಬಂಧಿ ಸಮಸ್ಯೆಗಳು ಅಥವಾ ಸ್ಥಳೀಯ ಪರಿಹಾರೋಪಾಯಗಳನ್ನು ಪ್ರತಿಬಿಂಬಿಸುವ, ವಿಷಯಗಳನ್ನು, ಆಯ್ದುಕೊಳ್ಳಲಾಗಿದೆ. ಜನ ಜಾಗೃತಿ ಕಾರ್ಯಕ್ರಮಗಳ ಮೂಲಕ, ಭೂಮಿಯ ಮೇಲಿನ ಜೀವರಾಶಿಗಳ ರಕ್ಷಣೆ, ಹವಾಮಾನ ಬದಲಾವಣೆಯ ಅರಿವು ಮತ್ತು ನೈಸರ್ಗಿಕ ವಿಕೋಪಗಳ ಮುನ್ಸೂಚನೆಯ ಬಗ್ಗೆ, ಮಾಹಿತಿ ನೀಡಲಾಗುತ್ತಿದೆ.*

<><><>

ವಿವೇಕ ಧ್ವನಿ 39 ಸೆಕೆಂದುಗಳು

<><><>

'ಇಂದಿನ ಆಚರಣೆ, ನಾಳೆಗಳ ರಕ್ಷಣೆ'; ಎಂಬ ಧ್ಯೇಯದೊಂದಿಗೆ, ಇಂದು ವಿಶ್ವಹವಾಮಾನ ದಿನ ಆಚರಿಸಲಾಗುತ್ತಿದೆ. ಧಾರವಾಡ ತಾಲೂಕು, ಮಂಡಿಹಾಳ ಗ್ರಾಮದ, ಸಾವಯವ ಕೃಷಿಕ, ಕೃಷ್ಣಕುಮಾರ ಭಾಗವತ, ತಮ್ಮ 46 ಎಕರೆ ತೋಟಕ್ಕೆ ನೀರಿನ ಅನುಕೂಲ ಕಲ್ಪಿಸಲು, 150 ಎಕರೆ ಅರಣ್ಯ ಭೂಮಿಯಿಂದ ಹರಿದು ಬರುವ ಮಳೆ ನೀರ ಹರಿವಿನ ನಕಾಶೆ ಆಧರಿಸಿ, ಎರಡು ಎಕರೆ ವಿಸ್ತೀರ್ಣದ ಕೆರೆ ರೂಪಿಸಿದ್ದಾರೆ. ತೇಲು ಹಾಳೆಗಳ ಮೂಲಕ, ಇಡೀ ತೋಟ, ಭತ್ತದ ಗದ್ದೆ ಹಾಗೂ ಸುತ್ತಲಿನ 18 ಕೊಳವೆ ಬಾವಿಗಳಿಗೆ, ಕೆರೆ ನೀರುಣಿಸುತ್ತಿದೆ. ವರ್ಷದ 6 ತಿಂಗಳು ಮೀನು ಕೃಷಿ ಹಾಗೂ 10 ತಿಂಗಳು, ತೋಟದಲ್ಲಿ ವಿವಿಧ ಹಣ್ಣುಗಳನ್ನು ಅವರು, ಬೆಳೆಯುತ್ತಿದ್ದಾರೆ. 2017 ರಲ್ಲಿ ಕಟ್ಟಲಾರಂಭಿಸಿದ ಕೆರೆ, ಮುಂದಿನ 3 ವರ್ಷಗಳಲ್ಲಿ, ಇಡೀ ತೋಟಕ್ಕೆ ನೀರ ನೆಮ್ಮದಿ ಕರುಣಿಸಿದೆ.

<><><>

ನೀರ ಸಂಬಂಧಿ ಸಮಸ್ಯೆಗೆ, ಸ್ಥಳೀಯ ಪರಿಹಾರ ಕಂಡುಕೊಂಡ, ಪ್ರಗತಿಪರ ಸಾವಯವ ಕೃಷಿಕ, ಕೃಷ್ಣಕುಮಾರ ಭಾಗವತ, ಪ್ರದೇಶ ಸಮಾಚಾರಕ್ಕೆ ತಮ್ಮ ಅನುಭವ ಹಂಚಿಕೊಂಡಿದ್ದಾರೆ.

<><><>

ಕೃಷಿಕ ಕೃಷ್ಣಕುಮಾರ ಭಾಗವತ ಧ್ವನಿ 60 ಸೆಕೆಂದುಗಳು

<><><>

ಕೃಷಿಕರು ಎಥೆನಾಲ್ ಉತ್ಪಾದಿಸಿ, ಮಾರಾಟ ಮಾಡಲು, ಅವಕಾಶ ಕಲ್ಪಿಸುವಂತೆ, ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ರಾಜ್ಯಾಧ್ಯಕ್ಷ, ಕುರುಬೂರು ಶಾಂತಕುಮಾರ ಕೇಂದ್ರ ಸರ್ಕಾರವನ್ನು ಆಗ್ರಹಿಸಿದ್ದಾರೆ. ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದಾರೆ. ವಿದೇಶಿ ಅನಿಲ ಪೂರೈಕೆ, ಮಧ್ಯಪ್ರಾಚ್ಯ ಮತ್ತು ಕೊಲ್ಲಿ ರಾಷ್ಟ್ರಗಳ ಮಧ್ಯದ ಸಂಘರ್ಷದ ಹಿನ್ನೆಲೆ, ಕೊರತೆಯಾಗಿದೆ. ದೇಶಾದ್ಯಂತ ಗ್ಯಾಸ್ ವಿತರಣೆಯಲ್ಲಿ ಅಭಾವ ಉಂಟಾಗಿದೆ. ವಿದೇಶಿ ವಿನಿಮಯ ಉಳಿಸಲು, ದೇಶಿ ಎಥೆನಾಲ್ ಉತ್ಪಾದನೆ ಉತ್ತೇಜಿಸುವುದು ಅಗತ್ಯ ಎಂದು, ಅವರು ತಿಳಿಸಿದ್ದಾರೆ.

<><><>

'ವಿಕಸಿತ ಭಾರತ 2047; ಪುಷ್ಪ ಕೃಷಿ ಹಾಗೂ ಅಲಂಕಾರೋದ್ಯಾನ ಮತ್ತು ಭೂ ದೃಶ್ಯ ವಿನ್ಯಾಸ' ಕುರಿತ, ರಾಷ್ಟ್ರೀಯ ವಿಚಾರ ಸಂಕಿರಣ, ಶಿವಮೊಗ್ಗದ ಕೃಷಿ ಮಹಾವಿದ್ಯಾಲಯದಲ್ಲಿ, ಇಂದಿನಿಂದ ಮೂರು ದಿನಗಳ ಕಾಲ, ಜರುಗಲಿದೆ. ಶಿವಮೊಗ್ಗದ ಕೆಳದಿ ಶಿವಪ್ಪ ನಾಯಕ, ಕೃಷಿ ಹಾಗೂ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಆಯೋಜಿಸಿದ ಸಮ್ಮೇಳನದಲ್ಲಿ, ಅಂತಾರಾಷ್ಟ್ರೀಯ ತಜ್ಞರು, ವಿಜ್ಞಾನಿಗಳು ಹಾಗೂ ಪುಷ್ಪ ಕೃಷಿಕರು, ಭಾಗವಹಿಸಲಿದ್ದಾರೆ.

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

(40 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಭಾರತ ಸ್ವಾತಂತ್ರ್ಯ ಸಂಗ್ರಾಮದ, ಅಸಾಧಾರಣ ಕ್ರಾಂತಿಕಾರಿಗಳಾದ, ಭಗತಸಿಂಗ್, ಶಿವರಾಮ ರಾಜಗುರು, ಸುಖದೇವ ಥಾಪರ ಅವರ, ಸರ್ವೋಚ್ಛ ತ್ಯಾಗವನ್ನು, ಹುತಾತ್ಮರ ದಿನವಾದ ಇಂದು, ಸ್ಮರಿಸಿ, ಶ್ರದ್ಧಾ ಸುಮನ ಅರ್ಪಿಸಲಾಗುತ್ತಿದೆ.

<><><>

"ನನ್ನ ಭಾರತ, ನನ್ನ ಜವಾಬ್ದಾರಿ" ಪರಿಕಲ್ಪನೆಯಡಿ, ದೇಶದಾದ್ಯಂತ 763 ಜಿಲ್ಲೆಗಳಲ್ಲಿ, '*ಶಹೀದ್ ದಿವಸ್ ಪದಯಾತ್ರಾ*,' 'ಮೇರಾ ಯುವ ಭಾರತ್' ಸಂಘಟನೆ, ಆಯೋಜಿಸಿದೆ. ಕೇಂದ್ರ ಯುವ ವ್ಯವಹಾರಗಳ, ರಾಜ್ಯ ಖಾತೆ ಸಚಿವರಾದ, ರಕ್ಷಾ ಖಡ್ಸೆ ಮತ್ತು ಹರಿಯಾಣ ಕ್ರೀಡಾ ಖಾತೆ ಸಚಿವ, ಗೌರವ ಗೌತಮ, ಹರಿಯಾಣಾದ ಫರಿದಾಬಾದ್‌ನಲ್ಲಿ ಇಂದು ಆಯೋಜಿತ, *ಶಹೀದ್ ದಿವಸ್ ಪದಯಾತ್ರಾ*, ನೇತೃತ್ವ ವಹಿಸಲಿದ್ದಾರೆ.

<><><>

ಬಲಿದಾನ ದಿವಸ್ ಪ್ರಯುಕ್ತ, ಧಾರವಾಡದ ವೀರ ಸಾವರಕರ ಬಳಗ, 'ಕ್ರಾಂತಿ ಚಿರಾಯುವಾಗಲಿ' ಎಂಬ ಧ್ಯೇಯದೊಂದಿಗೆ, ಇಂದು ಸಂಜೆ 6 ಗಂಟೆಗೆ, ಪಂಜಿನ ಮೆರವಣಿಗೆ ಆಯೋಜಿಸಿದೆ. ಧಾರವಾಡದ ಮಾಳಮಡ್ಡಿಯ, ವನವಾಸಿ ಶ್ರೀ ರಾಮ ಮಂದಿರದಿಂದ, ಕಾರ್ಗಿಲ್ ಸ್ತೂಪದ ವರೆಗೆ, ಪಂಜಿನ ಮೆರವಣಿಗೆ ನಡೆಯಲಿದೆ.

<><><>

'ಕಣ್ಣಿನ ಆರೈಕೆಯಲ್ಲಿ, ಜಾಗತಿಕ ಸಹಯೋಗ' ಎಂಬ ಧ್ಯೇಯದೊಂದಿಗೆ, 28ನೇ ತಾರೀಖಿನ ವರೆಗೆ, ವಿಶ್ವ ಆಪ್ಟೋಮೆಟ್ರಿ ಸಪ್ತಾಹವನ್ನು, ಆಚರಿಸಲಾಗುತ್ತಿದೆ. ಸಮೀಪ ದೃಷ್ಟಿದೋಷದ ನಿರ್ವಹಣೆ, ಸುಧಾರಿತ ಕಣ್ಣಿನ ತಪಾಸಣೆ ಮತ್ತು ತಂತ್ರಜ್ಞಾನದ ಬಗ್ಗೆ ಜನ ಜಾಗೃತಿ ಉದ್ದೇಶದೊಂದಿಗೆ, ನಾಳೆ, ವಿಶ್ವ ಆಪ್ಟೋಮೆಟ್ರಿ ದಿನ ಆಯೋಜಿತವಾಗಿದೆ. *ಯುನೈಟೆಡ್ ಆಪ್ಟೋಮೆಟ್ರಿಸ್ಟ್ ಫೋರಂ* ಮಯೋಪಿಯಾ ಕಾನ್‌ಕ್ಲೇವ್ 2.0 ವರ್ಚುವಲ್ ಕಾರ್ಯಕ್ರಮವನ್ನು, ದುಬೈನಲ್ಲಿ ಆಯೋಜಿಸಿದೆ. ತನ್ಮೂಲಕ, ನೇತ್ರ ತಜ್ಞರ ಕೊಡುಗೆಗಳನ್ನು ಗೌರವಿಸುವ ಮತ್ತು ದೃಷ್ಟಿ ಆರೋಗ್ಯದ ಬಗ್ಗೆ, ಜಾಗೃತಿ ಮೂಡಿಸುವ ದಿನವಾಗಿದೆ.

<><><>

ಪ್ರಸ್ತುತ ಮಾರ್ಚ್ ತಿಂಗಳನ್ನು, 'ಕಾರ್ಯನಿರ್ವಹಿಸುವ ಸ್ಥಳದಲ್ಲಿ, ಕಣ್ಣಿನ ಆರೋಗ್ಯ ರಕ್ಷಣೆ' ಮಾಸಿಕವನ್ನಾಗಿ ಆಚರಿಸಲಾಗುತ್ತಿದೆ.

<><><>

ಪ್ರದೇಶ ಸಮಾಚಾರಕ್ಕಾಗಿ, ಕಣ್ಣಿನ ಆರೋಗ್ಯದ ಕುರಿತು, ಮಾಹಿತಿ ನೀಡಿದ್ದಾರೆ, ಧಾರವಾಡದ ಹಿರಿಯ ನೇತ್ರ ತಜ್ಞೆ, ಶ್ವೇತಾ ಕುಡತಡಕರ.

<><><>

ಡಾ. ಶ್ವೇತಾ ಕುಡತಡಕರ ಧ್ವನಿ 37 ಸೆಕೆಂದುಗಳು

<><><>

‘*ಪ್ರಧಾನಮಂತ್ರಿ ಉಚ್ಚತ್ತರ ಶಿಕ್ಷಾ ಅಭಿಯಾನ*’ ಪಿ.ಎಂ. ಉಷಾ ಯೋಜನೆ ಅಡಿ, ‘ಭಾರತೀಯ ಜ್ಞಾನ ಪದ್ಧತಿ’ ಶೀರ್ಷಿಕೆಯ, ಎರಡು ದಿನಗಳ, ರಾಷ್ಟ್ರೀಯ ವಿಚಾರ ಸಂಕಿರಣ, ಕರ್ನಾಟಕ ವಿಶ್ವವಿದ್ಯಾಲಯದ, ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ, ಇಂದು ಬೆಳಗ್ಗೆ 10 ಗಂಟೆಗೆ, ಆರಂಭವಾಗಲಿದೆ. ಕರ್ನಾಟಕ ವಿಶ್ವವಿದ್ಯಾಲಯದ, ಸ್ನಾತಕೋತ್ತರ ಸಂಸ್ಕೃತ ಅಧ್ಯಯನ ವಿಭಾಗ ಆಯೋಜಿಸಿದ, ವಿಚಾರ ಸಂಕಿರಣವನ್ನು, ಉಪ ಕುಲಪತಿ, ಎ.ಎಂ.ಖಾನ್ ಉದ್ಘಾಟಿಸಲಿದ್ದಾರೆ. ಬೆಂಗಳೂರಿನ ಜೈನ ವಿಶ್ವವಿದ್ಯಾಲಯದ ಪ್ರಾಧ್ಯಾಪಕಿ, ರಜನಿ ಜಯರಾಮು, ದಿಕ್ಸೂಚಿ ಭಾ ´ಣ ಮಾಡಲಿದ್ದಾರೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಭಾರತ ಸ್ವಾತಂತ್ರ್ಯ ಸೇನಾನಿ, ಕರ್ನಾಟಕ ಏಕೀಕರಣದ ರೂವಾರಿ, ಅದರಗುಂಚಿಶಂಕರಗೌಡರ ಪುತ್ಥಳಿ ಸ್ಥಾಪಿಸುವಂತೆ, ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ ಪದಾಧಿಕಾರಿಗಳು, ಕುಂದಗೋಳ ಶಾಸಕ ಎಂ.ಆರ್.ಪಾಟೀಲ ಅವರಿಗೆ ಮನವಿ ಸಲ್ಲಿಸಿದ್ದಾರೆ.

<><><>

ಬಾಗಲಕೋಟೆ ವಿಧಾನಸಭೆ ಉಪ ಚುನಾವಣೆ, ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ, ಇಂದು, ನಾಮಪತ್ರ ಸಲ್ಲಿಸಲಿದ್ದಾರೆ ಎಂದು, ಜಿಲ್ಲಾ ಉಸ್ತುವಾರಿ ಸಚಿವ, ಆರ್.ಬಿ. ತಿಮ್ಮಾಪುರ ತಿಳಿಸಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ‘ಇಂದಿನ ಆಚರಣೆ, ನಾಳೆಗಳ ರಕ್ಷಣೆ’; ಧ್ಯೇಯದೊಂದಿಗೆ, ಇಂದು, ವಿಶ್ವಹವಾಮಾನ ದಿನಾಚರಣೆ.
- ‘ಕಣ್ಣಿನ ಆರೈಕೆಯಲ್ಲಿ, ಜಾಗತಿಕ ಸಹಯೋಗ’, ಘೋಷವಾಕ್ಯದೊಂದಿಗೆ, ಸಮೀಪ ದೃಷ್ಟಿದೋಷ ನಿರ್ವಹಣೆ, ಸಪ್ತಾಹ.
- ಇಂದು ಹುತಾತ್ಮರ ದಿನ; ದೇಶಾದ್ಯಂತ, 763 ಜಿಲ್ಲೆಗಳಲ್ಲಿ, ‘*ಶಹೀದ್ ದಿವಸ್ ಪದಯಾತ್ರಾ.*’
- *ಪಿ.ಎಂ. ಉಷಾ:* ಧಾರವಾಡ, ಕರ್ನಾಟಕ ವಿಶ್ವವಿದ್ಯಾಲಯದಲ್ಲಿ, ‘ಭಾರತೀಯ ಜ್ಞಾನ ಪದ್ಧತಿ’ ವಿಷಯದ, ರಾಷ್ಟ್ರೀಯ ವಿಚಾರ ಸಂಕಿರಣಕ್ಕೆ, ಇಂದು ಚಾಲನೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>